# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ





**ನವದೆಹಲಿ:** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಆಂಧ್ರಪ್ರದೇಶದ ರಾಜ್ಯಪಾಲ ಎಸ್ ಅಬ್ದುಲ್ ನಜೀರ್, ಏಷಿಯಾನೆಟ್ ನ್ಯೂಸ್ ಕಾರ್ಯಾಧ್ಯಕ್ಷ ರಾಜೇಶ್ ಕಲ್ರಾ ಅವರು 'Man of the Millennia: Dr Hedgewar' ಕೃತಿ ಲೋಕಾರ್ಪಣೆ ಮಾಡಿದರು.


ಸಂಪುಟ : 45 | ಸಂಚಿಕೆ : 22 | ಶೋಭಕೃತ್ – ಫಾಲ್ಗುಣ | ಕಲಿಯುಗಾಬ್ದ 5126 | 15-03-2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4




## ಚುನಾವಣೆಯ ಹಾದಿಯಲ್ಲೊಂದು ಬುನಾದಿ ಚಿಂತನೆ

ದೇಶಾದ್ಯಂತ ಲೋಕಸಭಾ ಚುನಾವಣೆಯ ಕಾವು ಪ್ರಖರತೆಯನ್ನು ಪಡೆಯುತ್ತಿದೆ. ಕಳೆದೈದು ವರ್ಷಗಳಲ್ಲಾದ ಅಭಿವೃದ್ಧಿ, ಜನಪ್ರತಿನಿಧಿಯೆನಿಸಿಕೊಂಡವನ ಆಡಳಿತರೀತಿ, ಜನರೊಡನೆ ಒಡನಾಟ, ಆರ್ಥಿಕ ಸ್ಥಿತಿಗತಿ ಇತ್ಯಾದಿ ನೆಲೆಗಳಲ್ಲಿ ವಿಮರ್ಶೆಯ ಅಲೆಗಳು ಎದ್ದುಬರುತ್ತಿವೆ. ರಾಷ್ಟ್ರೀಯ–ಅರಾಷ್ಟ್ರೀಯ, ಪ್ರಗತಿಪರ–ಪ್ರಗತಿ ವಿರುದ್ಧ ಮೊದಲಾದ ಧ್ರುವಗಳಲ್ಲಿ ರಾಜಕೀಯ ಪಕ್ಷಗಳನ್ನು ಅವಲೋಕಿಸುವ, ಆಮೂಲಕ ಮುಂದಿನ ಆಡಳಿತಾವಧಿಯಲ್ಲಿ ಸರ್ಕಾರವನ್ನು ಆಯ್ದುಕೊಳ್ಳುವ ನಿಟ್ಟಿನಲ್ಲಿ ಜನರ ಯೋಚನಾಲಹರಿ ಸಾಗುತ್ತಿದೆ. ದೇಶಕ್ಕೊಂದು ಸಮರ್ಥವಾದ ನಾಯಕತ್ವ ಬೇಕು, ಮತದಾರನ ಆಶೋತ್ತರಗಳನ್ನು ಅರಿತು ಮುನ್ನಡೆಯುವ ಸರ್ಕಾರ ಇರಬೇಕು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಂಥ ಆಡಳಿತ ನೆಲೆಗೊಳ್ಳಬೇಕು. ಪ್ರಜಾಪ್ರಭುತ್ವದ ಹಬ್ಬವೊಂದು ಆಚರಣೆಗೊಳ್ಳುವ ಸಂದರ್ಭದಲ್ಲಿ ಈ ಎಲ್ಲ ಯೋಚನೆಗಳು ಯೋಗ್ಯವಾದದ್ದೇ; ಅದು ಅಗತ್ಯ ಕೂಡ. ಆದರೆ ಇದರ ಇನ್ನೊಂದು ಮಗ್ಗುಲಿನ ಅವಲೋಕನ? ಪ್ರಜಾಪ್ರತಿನಿಧಿಯ ಮೇಲಿನ ನಿರೀಕ್ಷೆಗಳಂತೆಯೇ 'ಪ್ರಭು'ವೆನಿಸಿಕೊಂಡ ಪ್ರಜೆಯ ಕರ್ತವ್ಯಗಳೇನು? ಆತನಿಂದ ಪ್ರಜಾಪ್ರಭುತ್ವ ಅಪೇಕ್ಷಿಸುವುದೇನು? ಸರ್ಕಾರವೊಂದರ ರಚನೆಯಲ್ಲಿ ಮತದಾರನ ಪಾತ್ರ ಎಷ್ಟು ಮುಖ್ಯ? ಈ ಕೋನದಲ್ಲಿಯೂ ಚಿಂತನೆ ನಡೆಯಬೇಕು. ಅದರಲ್ಲಿಯೂ ಭಾರತದ ಭವಿಷ್ಯದ ಭರವಸೆಯೆನಿಸಿಕೊಂಡ ಯುವಶಕ್ತಿಯ ಹೊಣೆಗಾರಿಕೆಯನ್ನು ಹೆಚ್ಚಿನ ಒತ್ತು ಕೊಟ್ಟು ಚಿಂತಿಸಬೇಕು.

### ಯುವಶಕ್ತಿಯೇ ಆಸ್ತಿ

ದೇಶವೊಂದರ ಆಸ್ತಿ ಯಾವುದು ಎಂಬ ಪ್ರಶ್ನೆಗೆ ಸಿದ್ಧ ಉತ್ತರವಾಗಿ ಒದಗಿಬರುವುದು 'ಯುವಜನತೆ'. ಸ್ವಾಮಿ ವಿವೇಕಾನಂದರಂಥ ಶ್ರೇಷ್ಠ ಚಿಂತಕರಿಂದ ಹಿಡಿದು ದೇಶದ ಭವಿಷ್ಯದ ಚಿತ್ರಣವನ್ನು ಕಟ್ಟಿಕೊಡಲು ಯತ್ನಿಸುವವರೆಲ್ಲ ಯುವಜನತೆಯ ಮಹತ್ತ್ವವನ್ನು ಅಲ್ಲಗಳೆಯುವುದಿಲ್ಲ. ಯಾವ ದೇಶದ ಯುವಜನರು ಪ್ರಜ್ಞಾವಂತರೂ ಶಕ್ತಿವಂತರೂ ಸಬಲರೂ ಆಗಿರುತ್ತಾರೋ ಆ ದೇಶ ಅಭಿವೃದ್ಧಿ ಹೊಂದುತ್ತದೆ; ಬಲಶಾಲಿಯಾಗುತ್ತದೆ ಎಂಬುದು ಶತಮಾನಗಳಿಂದ ಒಪ್ಪಿತವಾದ ಮಾತು. ದೇಶದ ನೀತಿನಿರ್ಮಾಣ ಮಾಡುವವರು, ದೇಶದ ಕುರಿತು ದೂರಚಿಂತನೆ ನಡೆಸುವವರು ಮೊದಲು ಲಕ್ಷ್ಯ ವಹಿಸುವುದು ಯುವಶಕ್ತಿಯ ಮೇಲೆಯೇ. ಹಾಗಿದ್ದಾಗ, ಉಳಿದೆಲ್ಲ ವಯೋಮಾನದವರಿಗಿಂತ ಯುವಜನರು ದೇಶದ ಕಟ್ಟುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆಂಬುದು ಸತ್ಯಸಂಗತಿ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸದೃಢ ದೇಶವೊಂದರ ನಿರ್ಮಾಣ ಸಾಧ್ಯವಾಗುವುದು ಅದರ ಮೂಲ ಬೇರು ಮತದಾನದ ಮೂಲಕ. ಹಾಗಾಗಿ ಮತದಾನಕ್ಕೂ ಯುವಜನತೆಗೂ ನಡುವೆ ಏರ್ಪಡಬೇಕಾದ ನಂಟು ಮಹತ್ತ್ವಪೂರ್ಣ.

### ಮತದಾನವೆಂಬ ಮಹಾಯಜ್ಞ

ಪ್ರಾಜ್ಞರು ಮತದಾನವನ್ನು ಮಹಾಯಜ್ಞಕ್ಕೆ ಹೋಲಿಸಿದ ಉದಾಹರಣೆಗಳಿವೆ. ಮತದಾನ ಮಹಾಯಜ್ಞ ಹೇಗಾದೀತು? ಯಜ್ಞಕ್ಕೆ ಹವಿಸ್ಸು ಅರ್ಪಿಸುವವನ ಅಂತಃಶ್ರದ್ಧೆ, ಸಮರ್ಪಣೆ, ಕ್ರಿಯಾಶುದ್ಧಿಗಳು ಹೇಗಿರುತ್ತವೆಯೋ ಯಜ್ಞದ ಫಲವೂ ಹಾಗೆಯೇ ಇರುತ್ತದೆ. ಯಜ್ಞಕಾರ್ಯದಲ್ಲಿ ಅಪಚಾರವಾದಾಗ ವಿಕೃತ ಶಕ್ತಿಗಳು ಉದ್ಭವಿಸಿ, ಸಂಕಷ್ಟ ಎದುರಾದ ಘಟನೆಗಳು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿತವಾಗಿವೆ. ಮತದಾನವೆಂಬ ಯಜ್ಞದಲ್ಲಿಯೂ ಮತವನ್ನು ನೀಡುವವನ ದೂರದೃಷ್ಟಿ, ಚಿಂತನೆ, ಉದ್ದೇಶಗಳು ಹೇಗಿರುತ್ತವೆಯೋ ಫಲಿತಾಂಶವೂ ಹಾಗೆಯೇ ಇರುತ್ತದೆ. ರಾಷ್ಟ್ರಹಿತಕ್ಕೆ ಪೂರಕವಾದ, ಸಮಾಜದ ಮೇಲೆ ಕಾಳಜಿಯಿರುವ, ಸ್ವಾರ್ಥರಹಿತವಾದ ಮತ ಅದೇ ಚಿಂತನೆಯಿಂದ ರೂಪಿಸಲ್ಪಟ್ಟ ವ್ಯಕ್ತಿಯನ್ನು ಆಯ್ಕೆ ಮಾಡುತ್ತದೆ. ಅಂಥ ವ್ಯಕ್ತಿಗಳಿಂದ ರೂಪುಗೊಳ್ಳುವ ಸರ್ಕಾರವೂ ರಾಷ್ಟ್ರಹಿತವನ್ನು ಕಾಪಾಡುವಂಥದ್ದೂ ಸಮಾಜದ ಅಂತರಂಗವನ್ನು ಅರಿತು ಮುನ್ನಡೆಯುವಂಥದ್ದೂ ಆಗಿರುತ್ತದೆ. ಹಾಗಾಗಿ ಮತದಾನದ ಮಹಾಯಜ್ಞದಲ್ಲಿ ಮತವೆಂಬ ಹವಿಸ್ಸಿನ ಮೌಲ್ಯ ಎಣಿಕೆಗೆ ಸಿಗದ್ದು. ಅಂಥ ಮೌಲ್ಯಯುತ ಮತವನ್ನು ನೀಡಬೇಕಾದದ್ದು ರಾಷ್ಟ್ರನಿರ್ಮಾಣಕಾರ್ಯದ ಮೊದಲ, ಮಹತ್ತ್ವದ ಮೆಟ್ಟಿಲು.

### ಮತದಾರನ ಮಟ್ಟ

ಸಂವಿಧಾನದ ಪರಿಕಲ್ಪನೆಯಂತೆ ಮತವೆಂಬುದು ಮತದಾರನ ಮಟ್ಟದ ದ್ಯೋತಕ. ಮತದಾರ ಯಾವ 'ಮಟ್ಟ'ದಲ್ಲಿ ಯೋಚಿಸುತ್ತಾನೋ ಅವನು ಆಯ್ಕೆ ಮಾಡುವ ನಾಯಕನೂ ಅದೇ 'ಮಟ್ಟ'ದವನಾಗಿರುತ್ತಾನೆ. ಮತದಾರನ ಮಟ್ಟ ಮೇಲೇರಿದಷ್ಟು ಜನಪ್ರತಿನಿಧಿಯ ಮಟ್ಟ ಮೇಲೇರುತ್ತದೆ. ಅದು ಇಳಿದಷ್ಟು ಆತ ಆಯ್ಕೆ ಮಾಡುವ ವ್ಯಕ್ತಿಯ ಮಟ್ಟವೂ ಇಳಿಯುತ್ತದೆ. ಮತದಾರ ಅತ್ಯಂತ ಎತ್ತರದ ಮಟ್ಟದ ಆಡಳಿತವನ್ನು ನಿರೀಕ್ಷಿಸಿದರೆ ಅದು ಅವನ ಮತದ ಮೂಲಕ ವ್ಯಕ್ತವಾಗಿ ಅದೇ ರೀತಿಯ ಆಡಳಿತ ರೂಪುಗೊಳ್ಳುತ್ತದೆ. ಸರ್ಕಾರದ ಗುಣಮಟ್ಟದ ಕುರಿತು ಯಾವುದೇ ನಿರೀಕ್ಷೆಗಳಿಲ್ಲದೆ, 'ಮಾದರಿ' ಆಡಳಿತ ಹೇಗಿರಬೇಕೆಂಬ ಸ್ಪಷ್ಟತೆಯಿಲ್ಲದೆ ಚಲಾವಣೆಯಾದ ಮತ ಅಂಥದ್ದೇ ಅತಂತ್ರ, ಅಸ್ಪಷ್ಟವಾದ ಆಡಳಿತವನ್ನು ರೂಪಿಸುತ್ತದೆ. ಮತ ಒಂದು ಆಡಳಿತದ ಶ್ರೇಷ್ಠತೆಯನ್ನು ನಿರ್ಧರಿಸುವಂತೆಯೇ, ಶ್ರೇಷ್ಠವಾದ ಆಡಳಿತವೂ ಅದನ್ನು ಆಯ್ಕೆಗೊಳಿಸಿದ ಮತದಾರನ ಶ್ರೇಷ್ಠತೆಯನ್ನು ಗೊತ್ತುಪಡಿಸುತ್ತದೆ. ಯುವಜನತೆಯ ಮತವನ್ನು ಗಣನೆಗೆ ತೆಗೆದುಕೊಂಡರೆ, ಶ್ರೇಷ್ಠ ಸರ್ಕಾರವೊಂದು ರಚನೆಯಾದರೆ ಅದು ಆ ದೇಶದ ಯುವಜನತೆಯ ಪ್ರೌಢಿಮೆಯನ್ನು ಎತ್ತಿ ತೋರಿಸುತ್ತದೆ.

### ಪ್ರೌಢಿಮೆಯ ಮತಚಲಾವಣೆ

ಒಂದು ದೇಶದ ಯುವಜನತೆ ಹೇಗೆ ಚಿಂತಿಸುತ್ತದೆಯೋ ದೇಶವೂ ದೀರ್ಘಕಾಲ ಅದೇ ಚಿಂತನೆಯ ಪ್ರಭಾವದಲ್ಲಿಯೇ ಮುನ್ನಡೆಯುತ್ತದೆ ಎಂಬುದು ಹಲವಾರು ಸಂದರ್ಭಗಳಲ್ಲಿ ಸಿದ್ಧವಾಗಿದೆ. ತಲೆಮಾರೊಂದರಲ್ಲಿ ನಿರ್ಮಾಣವಾದ ನಂಬಿಕೆ, ಸಿದ್ಧಾಂತಗಳು ಆ ತಲೆಮಾರಿನ ಕೊನೆಯವರೆಗೆ ದೇಶವನ್ನು ಪ್ರಭಾವಿಸುತ್ತವೆ. ಹಾಗಾಗಿ ದೇಶವನ್ನು ಕಟ್ಟುವ ಸಾಮರ್ಥ್ಯ ಹೊಂದಿರುವ ಯುವಜನತೆ ಯಾವ ಸಿದ್ಧಾಂತವನ್ನು ಒಪ್ಪಿದ್ದಾರೆ, ಅವರ ಯೋಚನೆ ಯಾವ ನಿಟ್ಟಿನಲ್ಲಿದೆ ಎಂಬುದು ಮುಂದಿನ ಮೂರ್ನಾಲ್ಕು ದಶಕಗಳ ಕಾಲ ದೇಶಕ್ಕೆ ಮುಖ್ಯವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಂಥ ಚಿಂತನೆಗಳ ಪ್ರಕಟೀಕರಣಕ್ಕೆ ಇರುವ ಪ್ರಬಲವಾದ ದಾರಿ ಚುನಾವಣೆ. ತಾವು ಒಪ್ಪುವ ಸಿದ್ಧಾಂತವನ್ನು, ತಮ್ಮ ದೇಶ ಮುನ್ನಡೆಯಬೇಕಾದ ಮಾರ್ಗದ ರೂಪುರೇಷೆಯನ್ನು ತಾವೇ ನಿರ್ಧರಿಸಲು ಸಂವಿಧಾನಕರ್ತೃಗಳು ಮಾಡಿಕೊಟ್ಟ ಅವಕಾಶವದು. ಅಂಥ ಅವಕಾಶವನ್ನು ಯುವಜನರು ಹೇಗೆ ಬಳಸಿಕೊಳ್ಳುತ್ತಾರೆ ಎಂಬುದು ಅವರ ಪ್ರೌಢಿಮೆಯನ್ನು ತೋರಿಸುತ್ತದೆ. ರಾಷ್ಟ್ರಹಿತಕ್ಕೆ ಪೂರಕವಾದ ವ್ಯಕ್ತಿ ಅಥವಾ ಪಕ್ಷಕ್ಕೆ ಮತ ನೀಡುವ ಮೂಲಕ ಅಂಥ ಪ್ರೌಢಿಮೆಯನ್ನು ಯುವಶಕ್ತಿ ತೋರಬೇಕು ಎಂಬುದು ಸಂವಿಧಾನಕರ್ತೃಗಳ ಆದಿಯಾಗಿ ರಾಷ್ಟ್ರೀಯರೆಲ್ಲರ ಅಪೇಕ್ಷೆ.

### ರಾಷ್ಟ್ರನಿರ್ಮಿತಿಯ ಹೊಣೆ

ರಾಷ್ಟ್ರವೊಂದರ ಏಳ್ಗೆಯಲ್ಲಿ ಅದರ ಪ್ರತಿಯೊಬ್ಬ ಮತದಾರನ ಕೊಡುಗೆ ಇದ್ದೇ ಇದೆ. ಭವಿಷ್ಯದ ರಾಷ್ಟ್ರವನ್ನು ಕಟ್ಟುವ ಹೊಣೆ ಯುವಶಕ್ತಿಯ ಮೇಲಿರುವುದರಿಂದ ಅವರ ಮತದ ಮೇಲೆ ಮತ್ತಷ್ಟು ನಿರೀಕ್ಷೆ. ರಾಷ್ಟ್ರನಿರ್ಮಾಣದಲ್ಲಿ ಮತ ಮಹತ್ತ್ವದ್ದು ಎಂದಾದಮೇಲೆ ಅದನ್ನು ಎಂಥವರಿಗೆ ನೀಡಬೇಕು ಎಂಬುದು ಕೂಡ ಬಹುಮುಖ್ಯವಾದ ಪ್ರಶ್ನೆ. ಒಂದು ರಾಷ್ಟ್ರಕ್ಕೆ 'ರಾಷ್ಟ್ರೀಯತೆ'ಯೇ ಜೀವಾಳ. ಭಾರತದ ಮಟ್ಟಿಗೆ ಆ ಜೀವಾಳ 'ಹಿಂದುತ್ವ'. ಇಲ್ಲಿನ ಪರಂಪರೆಗೆ ಗೌರವ ಕೊಡುವ ಸಂಸ್ಕೃತಿ, ಈ ಮಣ್ಣಿನ ಅಸ್ಮಿತೆಯನ್ನು ಅರಿತು ಬಾಳುವ ಜೀವನಪದ್ಧತಿ, ರಾಷ್ಟ್ರದ ಹಿತಕ್ಕೆ ಇನಿತೂ ಧಕ್ಕೆ ತರದಂಥ ಜೀವಿಕೆ – ಇವೆಲ್ಲವೂ ರಾಷ್ಟ್ರೀಯತೆಯ ಹಲವು ಮುಖಗಳು. ಇಂಥ 'ರಾಷ್ಟ್ರೀಯತೆ'ಯನ್ನು ಪಾಲಿಸಿದಾಗ ಮಾತ್ರ ರಾಷ್ಟ್ರದ ಜೀವಂತಿಕೆ ಸಾಧ್ಯ. ಇಲ್ಲದಿದ್ದರೆ ರಾಷ್ಟ್ರ ಭೌಗೋಳಿಕ ಮತ್ತು ಆಡಳಿತಾತ್ಮಕ ನೆಲೆಯಲ್ಲಿ ರಾಷ್ಟ್ರ ಎಂದು ಕರೆಸಿಕೊಳ್ಳಬಹುದೇ ಹೊರತು ಬಲವಾದ ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ನಿರ್ಮಾಣವಾದ ರಾಷ್ಟ್ರವನ್ನು ಅಪೇಕ್ಷಿಸಲು ಸಾಧ್ಯವಿಲ್ಲ. ಹಾಗಾಗಿ ರಾಷ್ಟ್ರದ 'ಜೀವಂತಿಕೆ'ಯನ್ನು ಕಾಪಿಟ್ಟುಕೊಂಡು ಹೋಗುವ ಸರ್ಕಾರವನ್ನು ರಚಿಸುವುದು ಎಲ್ಲ ಕಾಲದ ಅಗತ್ಯ. ರಾಷ್ಟ್ರೀಯತೆಯನ್ನು ಗೌರವಿಸುವ, ಅದರ ತಳಹದಿಯ ಮೇಲೆಯೇ ಆಡಳಿತ ನಡೆಸುವ ಸರ್ಕಾರ ನಿರ್ಮಾಣವಾದರೆ ರಾಷ್ಟ್ರವೂ ಸುಭದ್ರ; ಅದರಲ್ಲಿ ಜೀವನ ನಡೆಸುವ ಪ್ರಜೆಗಳ ಬದುಕೂ ಸುಭದ್ರ. ಇದೀಗ ಚುನಾವಣೆಯನ್ನು ಎದುರುನೋಡುತ್ತಿರುವ ಸಂದರ್ಭದಲ್ಲಿ ಅಂಥ ಸರ್ಕಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ಮತ ಚಲಾಯಿಸುವುದು ಪ್ರಜೆಯೆನಿಸಿಕೊಂಡವನ ಕರ್ತವ್ಯ. ಯುವಜನತೆಗಂತೂ ಇದು ಎದೆಯಲ್ಲಿಟ್ಟುಕೊಂಡು ನಡೆಯಬೇಕಾದ ಪರಮ ಕರ್ತವ್ಯ.

### ಪ್ರಲೋಭನೆಯ ಸುಳಿ

ರಾಷ್ಟ್ರಜೀವನಕ್ಕೆ ಧಕ್ಕೆ ತರುವಂಥ ಅಪಾಯಗಳು ಹಲವಿವೆ. ಭಾರತ ಶತಮಾನಗಳಿಂದ ಅಂಥ ಅಡೆತಡೆಗಳ ಪ್ರವಾಹವನ್ನೇ ಎದುರಿಸಿದೆ. ರಾಷ್ಟ್ರೀಯತೆಗೆ ತಡೆಯೊಡ್ಡುವ ಆ ಶಕ್ತಿಗಳಿಗೆ ಹಲವು ಮುಖಗಳು; ಹಲವು ಬಣ್ಣಗಳು. ಅವುಗಳ ಸ್ವರೂಪವೂ ಕಾಲಕಾಲಕ್ಕೆ ಬದಲಾಗುತ್ತ ಇರುತ್ತದೆ. ಕೆಲವೊಮ್ಮೆ ಅವು 'ಅಪಾಯ' ಎಂಬ ಅರಿವೂ ಸಾಧ್ಯವಾಗದಷ್ಟು ನವಿರಾದ ರೀತಿಯಲ್ಲಿ ವ್ಯಕ್ತಗೊಳ್ಳುತ್ತವೆ. ಇಂಥವನ್ನು ಗುರುತಿಸುವಲ್ಲಿ ಯಶಸ್ವಿಯಾಗುವುದು ಮೊದಲ ಸವಾಲು. ಪ್ರಸ್ತುತ ಭಾರತದ ಸ್ಥಿತಿಗತಿಗಳನ್ನು ಅವಲೋಕಿಸಿದರೆ, ರಾಷ್ಟ್ರವಿಭಜನೆ, ಉತ್ತರ–ದಕ್ಷಿಣ ಭಾರತೀಯರ ಪ್ರತ್ಯೇಕತೆ, ಭಾಷಾ ವೈಷಮ್ಯ, ಮತೀಯ ದ್ವೇಷ ಮೊದಲಾದ ರೂಪಗಳಲ್ಲಿ ಅವು ಪ್ರಕಟಗೊಳ್ಳುತ್ತಿವೆ. ಅದಕ್ಕಾಗಿ ಅನ್ಯಾನ್ಯ ರೀತಿಗಳಲ್ಲಿ ಪ್ರಯತ್ನವೂ ನಡೆಯುತ್ತಿದೆ. ಇಂಥ ರಾಷ್ಟ್ರವಿರೋಧಿ ಶಕ್ತಿಗಳು ತಮ್ಮ ಗುರಿಯನ್ನು ತಲುಪಲು ಹಿಡಿಯುವ ಮಾರ್ಗ ಅಧಿಕಾರ. ಅಧಿಕಾರವನ್ನು ಕೈಗೆತ್ತಿಕೊಂಡರೆ ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳುವುದು ಅತ್ಯಂತ ಸುಲಭಸಾಧ್ಯ ಎಂಬುದು ಈಗಾಗಲೇ ಅವುಗಳಿಗೆ ಮನದಟ್ಟಾಗಿದೆ. ಹಾಗಾಗಿ ಅಧಿಕಾರ ಹಿಡಿಯಲು ಯಾವೆಲ್ಲ ತಂತ್ರಗಳನ್ನು ಪ್ರಯೋಗಿಸಲೂ ಅವು ಹಿಂಜರಿಯುವುದಿಲ್ಲ. ರಾಷ್ಟ್ರದ ಮುಂದಿನ ಹಲವು ವರ್ಷಗಳ ಭವಿಷ್ಯವನ್ನು ಬರೆಯಲಿರುವ ಚುನಾವಣೆ ಆ ಶಕ್ತಿಗಳ ಭವಿಷ್ಯವನ್ನೂ ಬರೆಯುತ್ತದೆ. ಹಾಗಾಗಿ ಪ್ರಲೋಭನೆಗಳ ದಾಳವನ್ನು ಉರುಳಿಸಿ ಚುನಾವಣೆಯನ್ನು ಗೆಲ್ಲುವ ಹುನ್ನಾರ ಜೋರಾಗಿಯೇ ನಡೆಯುತ್ತದೆ. ಹಣ, ಹೆಂಡ, ಹುದ್ದೆಗಳ ತಾತ್ಕಾಲಿಕ ಆಕರ್ಷಣೆಗಳು ರಾಷ್ಟ್ರೀಯರನ್ನು ಅರಾಷ್ಟ್ರೀಯತೆಯೆಡೆಗೆ ಸೆಳೆಯುವ ಸುಳಿಗಳು. ಆ ಸುಳಿಯಿಂದ ತಪ್ಪಿಸಿಕೊಳ್ಳುವುದೇ ಮತದಾನದ ಯಜ್ಞಕ್ಕೆ ಬೇಕಾದ ಪೂರ್ವತಯಾರಿ. ಭಾರತದ ಯುವಜನತೆ ಅಂಥ ಪ್ರಲೋಭನೆಗಳ ಪಾಶಕ್ಕೆ ಬಲಿಯಾಗದಿದ್ದರೆ ಪ್ರಜಾಪ್ರಭುತ್ವದ ಹಬ್ಬ ಯಶಸ್ವಿಯಾದಂತೇ!

ಇದೀಗ ಭಾರತದ ಭವಿಷ್ಯವನ್ನು ಬರೆಯಲಿರುವ ಚುನಾವಣೆಯ ಹೊಸ ಗಾಳಿ ಬೀಸುವ ಹೊತ್ತು. ರಾಷ್ಟ್ರದ ಹಿತಚಿಂತನೆಯ ನವಿರುಗಾಳಿ ನಮ್ಮ ಯುವಶಕ್ತಿಯ ಮೈಮನಗಳನ್ನು ತಬ್ಬಲಿ. ಆ ಮೂಲಕ ಅರಾಷ್ಟ್ರೀಯ ಶಕ್ತಿಗಳ ಆಟಾಟೋಪ ಶಾಶ್ವತವಾಗಿ ನಿಲ್ಲಲಿ.

▪ ದಿವ್ಯಾ ಹೆಗಡೆ ಕಬ್ಬಿನಗದ್ದೆ

# ಸಂಸ್ಮರಣೆ — ಮುಮ್ಮಡಿ ಕೃಷ್ಣರಾಜ ಒಡೆಯರ್



ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸಂಸ್ಥಾನವನ್ನು ಸುದೀರ್ಘಕಾಲ ಆಳಿದ ಮತ್ತು ಎಷ್ಟೋ ಸಾಹಸಗಳಿಗೆ ಮುಂದಡಿಯಿಟ್ಟ ಮಹತ್ವಕಾಂಕ್ಷಿ ರಾಜ. ಮೈಸೂರಿನ ರಾಜವಂಶದ 22ನೇ ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ತಮ್ಮ ಘನತೆ, ದಕ್ಷತೆ, ಗಾಂಭೀರ್ಯ, ಪ್ರಜಾಪರ ಕೆಲಸ, ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿನ ಅಪಾರ ಆಸಕ್ತಿ, ನಿರಂತರ ವಾಸ್ತು ಶಿಲ್ಪಗಳ ಪೋಷಣೆಯೊಂದಿಗೆ ಸದಾ ಹೊಸತನಕ್ಕೆ ತೆರೆದುಕೊಳ್ಳುವ ಗುಣದಿಂದಾಗಿ ಹೆಚ್ಚು ಪ್ರಸಿದ್ಧರಾಗಿದ್ದರು. ಆ ಕಾರಣದಿಂದಲೇ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ಈಗಲೂ ಮೈಸೂರು ಸಂಸ್ಥಾನದ ರಾಜನಾಗಿ ಅಷ್ಟೇ ಅಲ್ಲದೆ ಒಬ್ಬ ಬಹುಶ್ರುತ ಪ್ರತಿಭೆಯ ಕವಿಯಾಗಿ ಮತ್ತು ಕಲಾ ರಸಿಕನಾಗಿ ಕಂಡು ಅತ್ಯಂತ ಗೌರವದಿಂದ ಸ್ಮರಿಸಲಾಗುತ್ತದೆ.

## ಪರಿಚಯ

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು 1794 ರ ಜುಲೈ 14 ರಂದು ಜನಿಸಿದ್ದಾರೆ ಎಂದು ಹಲವು ದಾಖಲೆಗಳಲ್ಲಿ ಹೇಳಲಾಗಿದೆ. ತಾಯಿ ಕೆಂಪ ನಂಜಮ್ಮಣ್ಣಿ ಬಾಣಂತಿ ಇರುವಾಗಲೇ ತೀರಿಕೊಂಡರೆ ತಂದೆಯೂ ಮಗುವಿಗೆ ಎರಡು ವರ್ಷ ಆಗುವುದರೊಳಗೆ ಸಿಡುಬಿನ ಕಾಯಿಲೆಯಿಂದ ನಿಧನರಾಗುತ್ತಾರೆ. ಮುಮ್ಮಡಿ ಅವರನ್ನು ಅಜ್ಜಿ ಲಕ್ಷಮ್ಮಣ್ಣಿ ಸಾಕಿದರು ಎನ್ನಲಾಗುತ್ತದೆ. ಹೈದರ್ ಅಲಿ ಮತ್ತು ಟಿಪ್ಪುವಿನ ಕಾಲದಲ್ಲಿ ತಮ್ಮ ಅಧಿಕಾರವನ್ನು ಕಳೆದುಕೊಂಡಿದ್ದ ಮೈಸೂರು ರಾಜವಂಶ ಟಿಪ್ಪುವಿನ ಮರಣದ ನಂತರ ಅಧಿಕಾರದ ಗದ್ದುಗೆಗೆ ಏರಿತು. ಐದು–ಆರು ವರ್ಷದ ಹಾಲುಗಲ್ಲದ ಬಾಲಕನಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದರು. ದಿವಾನ್ ಪೂರ್ಣಯ್ಯ ಆಡಳಿತ ಸೂತ್ರಗಳನ್ನು ವಹಿಸಿಕೊಂಡಿದ್ದರು. ಪೂರ್ಣಯ್ಯ ಕಾಲವಾದ ನಂತರ ಅಂದರೆ ತಮ್ಮ 18ನೇ ವಯಸ್ಸಿನಲ್ಲಿ ಒಡೆಯರ್ ಸಂಪೂರ್ಣ ಆಡಳಿತವನ್ನು ವಹಿಸಿಕೊಂಡರು. ತಮ್ಮ ಚತುರಮತಿಯಿಂದ ರಾಜ್ಯದ ಆಡಳಿತವನ್ನು ಸುಧಾರಿಸಿದರು. ಭೀಕರ ಕ್ಷಾಮ ಎದುರಾದಾಗ ಅರಮನೆಯ ಬೊಕ್ಕಸದ ಹಣವನ್ನು ಜನತೆಯ ಸಂಕಷ್ಟವನ್ನು ನೀಗಿಸಲು ಖರ್ಚು ಮಾಡಿದರು. ಸದಾ ಜನತೆಯ ಕಲ್ಯಾಣಕ್ಕಾಗಿ ತುಡಿಯುತ್ತಿದ್ದ ಒಡೆಯರ್ ರಾಜ್ಯಕ್ಕೆ ಅನೇಕ ಕಾರಣಗಳಿಂದ ಅಪಾರ ನಷ್ಟವಾದಾಗಲೂ ಜನಪರ ಕೆಲಸಗಳನ್ನು ಮಾಡಿದರು.

## ಮಹತ್ವದ ಕೆಲಸಗಳು

ನಿಜ ಅರ್ಥದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಮೈಸೂರು ರಾಜ್ಯಕ್ಕೆ ಆಧುನಿಕತೆಯ ಸ್ಪರ್ಶ ನೀಡಿದವರು. ಅವರು ಸುಖೀ ರಾಜ್ಯದ ಕನಸನ್ನು ಇಟ್ಟುಕೊಂಡಿದ್ದರು. ಅವರ ಕಾಲದಲ್ಲಿ ಮೊಟ್ಟ ಮೊದಲ ಬಾರಿಗೆ ಸಾರ್ವಜನಿಕ ಉಚಿತ ವೈದ್ಯ ಶಾಲೆಗಳು ಪ್ರಾರಂಭವಾದವು. ರಾಜ್ಯದಲ್ಲಿ ಆಂಗ್ಲ ಶಿಕ್ಷಣವನ್ನು ಜಾರಿಗೊಳಿಸಿದ್ದರು. ಮೈಸೂರಿನಾದ್ಯಂತ ಹೊಸ ಬಡಾವಣೆಗಳನ್ನು ನಿರ್ಮಿಸಿದ್ದರು. ನದಿಗಳಿಗೆ ಸೇತುವೆಗಳನ್ನು ಕಟ್ಟಿಸಿದ್ದರು. ತಮ್ಮ ಆರು ದಶಕಗಳ ರಾಜಾಡಳಿತದಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅನೇಕ ಸುಧಾರಣೆಗಳಿಗೆ ನಾಂದಿ ಹಾಡಿದ್ದರು.

## ಸಾಹಿತ್ಯ ಪೋಷಕ

ಮುಮ್ಮಡಿ ಕೃಷ್ಣರಾಜ ಒಡೆಯರ್ ಒಬ್ಬ ಅಸಾಮಾನ್ಯ ಸಾಹಿತಿಯಾಗಿದ್ದರು. ಅವರು ಬಹುಭಾಷಾ ಪಂಡಿತರಾಗಿದ್ದರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಅವರ ಸೇವೆ ಅನುಪಮವಾಗಿತ್ತು. ನಿರಂತರವಾಗಿ ಬರೆಯುತ್ತಿದ್ದ ಒಡೆಯರ್ ಅವರು ಆಗಷ್ಟೇ ಹುಟ್ಟಿಕೊಂಡಿದ್ದ ನವೋದಯ ಕನ್ನಡ ಸಾಹಿತ್ಯ ಲೋಕದ ಅತ್ಯಂತ ಭರವಸೆಯ ಕವಿಯಾಗಿ ಮಹತ್ವದ ಕೃತಿಗಳ ಕರ್ತೃವಾಗಿ ಸಾಹಿತ್ಯ ಲೋಕವನ್ನು ಹೊಸ ದಿಕ್ಕಿನತ್ತ ಕೊಂಡೊಯ್ದಿದ್ದರು. ಅವರು ಭಾಷೆಗಳ ನಡುವೆ ಸಂಸರ್ಗವನ್ನೂ ಬೆಳೆಸಿದ್ದರು. ಬಹು ಮುಖ್ಯವಾಗಿ ಮುಮ್ಮಡಿ ಗದ್ಯ ಬರೆಹದ ಮಾಂತ್ರಿಕ. ಸಂಸ್ಕೃತ ಭಾಷೆಯ ಭಾರತ, ಭಾಗವತವನ್ನು ಕನ್ನಡ ಭಾಷೆಗೆ ತಂದು ಚೆಂದಗಾಣಿಸಿದ್ದರು. ಕಾಳಿದಾಸನ ಶಾಕುಂತಲ ಮಾಳವಿಕಾಗ್ನಿ ಮಿತ್ರ ನಾಟಕಗಳನ್ನೂ ಬಹಳ ಸಲೀಸಾಗಿ ಸರಳ ರೂಪದಲ್ಲಿ ಕನ್ನಡಕ್ಕೆ ಗದ್ಯಾನುವಾದ ಮಾಡಿದ್ದಾರೆ. ಅಷ್ಟೇ ಅಲ್ಲದೇ ಕಥೆಗಳನ್ನು ಅದ್ಭುತವಾಗಿ ಬರೆಯುವವುದರ ಜತೆಗೆ ಹೇಳುವ ಕಲೆಯನ್ನೂ ಒಡೆಯರ್ ಸಿದ್ಧಿಸಿಕೊಂಡಿದ್ದರು. ತತ್ವನಿಧಿ, ಶ್ರೀ ಚಾಮುಂಡಿಕಾ ಲಘು ನಿಘಂಟು, ಕೃಷ್ಣ ಕಥಾ ಸಾರ ಸಂಗ್ರಹ, ದೇವತಾನಾಮ ಕುಸುಮ ಮಂಜರಿ, ದಶವಿಭಾಗ ಪದಕ ಇವುಗಳು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪ್ರಸಿದ್ಧ ಕೃತಿಗಳು. ಇಲ್ಲಿಯವರೆ 57ಕ್ಕೂ ಹೆಚ್ಚು ಕೃತಿಗಳು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಹೆಸರಿನಲ್ಲಿ ಸಿಕ್ಕಿವೆ.

ಸಾಕಷ್ಟು ಕವಿಗಳಿಗೆ ಮುಮ್ಮಡಿ ರಾಜಾಶ್ರಯವನ್ನೂ ನೀಡಿ ಅವರ ಪ್ರತಿಭೆಗೆ ಪ್ರೋತ್ಸಾಹದ ನೀರೆರೆಯುತ್ತಿದ್ದರು. ದೇವಚಂದ್ರ ಮತ್ತು ಕೆಂಪು ನಾರಾಯಣ ಎಂಬ ಇಬ್ಬರು ಪ್ರಸಿದ್ಧ ಕವಿಗಳು ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲಕ್ಕೆ ಸೇರಿದವರಾಗಿದ್ದರು. ಮುಮ್ಮಡಿ ಒಡೆಯರ್ ಅವರಿಗೆ ಕವಿಜನ ಕಾಮಧೇನು, ಕನ್ನಡದ ಭೋಜ ಎಂಬ ಬಿರುದುಗಳಿದ್ದವು. ಕನ್ನಡವನ್ನು ಕಟ್ಟಿ ಬೆಳೆಸುವುದರಲ್ಲಿ ಅವರ ಪಾತ್ರವೂ ಹಿರಿದಾಗಿತ್ತು ಎಂದು ಹೇಳಬಹುದು.

ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಆಡಳಿತವನ್ನಷ್ಟೇಯಲ್ಲದೇ ಕಲಾ ಸೇವೆಯನ್ನೂ ಮಾಡಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ತಮ್ಮ 74ನೇ ಇಳಿ ವಯಸ್ಸಿನಲ್ಲಿ ವಿಧಿವಶರಾದರು. ಅವರನ್ನು ಮೈಸೂರು ರಾಜವಂಶವನ್ನು ಬಹುಕಾಲ ಆಳಿದ ಅರಸ ಎಂದು ಕರೆಯಲಾಗುತ್ತದೆ.

# ಎಲ್ಲೋ ಕೇಳಿದ ಕಥೆ

## ತಿಲಕರ ಪ್ರತಿಮೆಗೆ ಮಾನವಂದನೆ


1928ರ ಅಕ್ಟೋಬರ್‌ನಲ್ಲಿ ನಾಗಪುರದಲ್ಲಿ ಲೋಕಮಾನ್ಯ ತಿಲಕರ ಭವ್ಯ ಪ್ರತಿಮೆಯೊಂದು ಲೋಕಾರ್ಪಿತವಾಯಿತು. ಆ ದಿನಗಳಲ್ಲಿ ನಾಗಪುರದ ರಾಜಕಾರಣ ಎರಡು ಬಣಗಳಲ್ಲಿ – ಬ್ಯಾರಿಸ್ಟರ್ ಅಭ್ಯಂಕರ್ ಮತ್ತು ಡಾ। ಮುಂಜೆ ಅವರ ಹೆಸರಲ್ಲಿ – ಒಡೆದು ಹೋಳಾಗಿ! ಎರಡು ಬಣಗಳಲ್ಲಿ ಪರಸ್ಪರ ಪೈಪೋಟಿ, ಕೆಲವೊಮ್ಮೆ ತಿಕ್ಕಾಟ ಮಾಮೂಲಿನ ಸಂಗತಿ. ಪ್ರತಿಮೆಯ ಲೋಕಾರ್ಪಣದಲ್ಲಿ ಪಾತ್ರವಹಿಸಿದ್ದವರೆಲ್ಲ ಬ್ಯಾ. ಅಭ್ಯಂಕರ್ ಗುಂಪಿನವರು. ಕಾರ್ಯಕ್ರಮದ ಸಮಿತಿಯವರು ಉದ್ದೇಶಪೂರ್ವಕ ಡಾ। ಮುಂಜೆ, ಡಾ.ಕೇಶವ ಬಲಿರಾಮ ಹೆಡಗೇವಾರ್ ಮತ್ತು ಶ್ರೀ ಭವಾನಿಶಂಕರ ನಿಯೋಗಿ ಅವರಿಗೆ ಆಹ್ವಾನವನ್ನೇ ನೀಡಿರಲಿಲ್ಲ. ಕಾರಣವೆಂದರೆ ಅವರೆಲ್ಲ ಹಿಂದುರಾಷ್ಟ್ರವಾದಿಗಳು ಎಂಬುದು. ಈ ಗುಂಪಿನಲ್ಲಿರುವವರನ್ನು ಕಿಚಾಯಿಸುವ ಸಲುವಾಗಿಯೇ ಪ್ರತಿಮೆಯ ಲೋಕಾರ್ಪಣ ಮಾಡಿಸಿದ್ದು ಡಾ. ಅನ್ಸಾರಿಯವರ ಕೈಗಳಲ್ಲಿ.

ಆದರೆ ಡಾಕ್ಟರ್‌ಜಿಯವರು ಈ ವಿಷಯದಲ್ಲಿ ತಲೆಕೆಡಿಸಿಕೊಳ್ಳಲಿಲ್ಲ. ತಿಲಕರ ಪ್ರತಿಮೆ ಲೋಕಾರ್ಪಣ ಗೊಂಡಿದ್ದುದೇ ತುಂಬ ಸಂತಸ ನೀಡಿದ ಸಂಗತಿಯಾಗಿತ್ತು. ತಿಲಕರ ಕಟ್ಟಾ ಅನುಯಾಯಿಗಳಾಗಿದ್ದವರು ಅವರು. ಸಮಾರಂಭದಲ್ಲಿ ಸಹಭಾಗಿಯಾಗಲು ಅವಕಾಶ ಸಿಗದಿದ್ದರು ಪ್ರತಿಮೆಯಂತೂ ಸ್ಥಾಪಿತವಾಯಿತು ಹಾಗೂ ಮುಂದೆ ಅದು ಶಾಶ್ವತವಾಗಿ ಅಲ್ಲಿ ಉಳಿಯಲಿದೆ ಎಂಬುದೇ ಅವರಿಗೆ ಅತ್ಯಂತ ಹರ್ಷ ಉಂಟುಮಾಡುವಂತಹದಾಗಿತ್ತು. ಡಾ. ಅನ್ಸಾರಿಯವರ ಕೈಗಳಲ್ಲಿ ಲೋಕಾರ್ಪಣದ ಮಾತ್ರಕ್ಕೆ ಹಿಂದು ವಿಚಾರಕ್ಕೆ ಧಕ್ಕೆಯಾಯಿತು ಹಾಗೂ ಹಿಂದು ರಾಷ್ಟ್ರವಾದಕ್ಕೆ ಅವಮಾನವಾಯಿತೆಂದು ತಿಳಿಯುವಂತ ಸಣ್ಣ ಮನಸ್ಸಿನವರಾಗಿರಲಿಲ್ಲ ಅವರು.

ಅದೇ ತಿಂಗಳಲ್ಲಿ ಮುಂದೆ ಕೆಲವೇ ದಿನಗಳಲ್ಲಿ ಅವರು ಸ್ವಯಂಸೇವಕರನ್ನು ಗಣವೇಷ ಸಹಿತ ಸಂಚಲನದಲ್ಲಿ ಕರೆದೊಯ್ದು, ಪ್ರತಿಮೆಗೆ ಮಾನವಂದನೆ ಸಲ್ಲಿಸಿದರು. ಆ ಸಂದರ್ಭದಲ್ಲಿ ಅವರು ಮಾಡಿದ್ದ ಭಾವಾಂಜಲಿಯ ಅತ್ಯುತ್ಕೃಷ್ಟ ಭಾಷಣದ ವರದಿಯನ್ನು ನಾಗಪುರದ ಪತ್ರಿಕೆಗಳೆಲ್ಲವೂ ಪ್ರಕಟಿಸಿದ್ದವು. ಇನ್ನೂ ವಿಶೇಷವೆಂದರೆ ಸ್ವಯಂಸೇವಕರ ಅನುಶಾಸನಬದ್ಧ ಸಂಚಲನ ಕಂಡು ನಾಗಪುರದ ಪೊಲೀಸ್ ಅಧಿಕಾರಿ ಸರದಾರ್ ಹರಬನ್ಸ್‌ಸಿಂಗ್ ಅವರು ಪ್ರಶಂಸಿದ್ದನ್ನು ಸಹ ಪತ್ರಿಕೆಗಳು ವರದಿ ಮಾಡಿದ್ದವು.

**ಮೂಲ : ಸ್ಮೃತಿ ಮಂದಾರ**

# ಪುಸ್ತಕ ಪರಿಚಯ




ರೂ.855 (ಅಂಚೆ ವೆಚ್ಚ ಸೇರಿ)

## ಸಾವರ್ಕರ್

ಲೇಖಕರು : ವಿಕ್ರಮ್ ಸಂಪತ್
ಕನ್ನಡಕ್ಕೆ ಅನುವಾದ : ಎಸ್ ಎಸ್ ನರೇಂದ್ರ ಕುಮಾರ್
ಪ್ರಕಾಶಕರು : ಸಾಹಿತ್ಯ ಪ್ರಕಾಶನ

ಇಂದು ಭಾರತದ ರಾಜಕೀಯ ಕ್ಷೇತ್ರದ ಧ್ರುವತಾರೆಯ ಸ್ಥಾನಕ್ಕೆ ಏರಿರುವ ವಿನಾಯಕ ದಾಮೋದರ ಸಾವರ್ಕರ್ ಅವರು ನಿಸ್ಸಂದೇಹವಾಗಿ ಇಪ್ಪತ್ತನೇ ಶತಮಾನದ ಪ್ರಬುದ್ಧ ಚಿಂತಕರಾಗಿದ್ದರು. ಸ್ವಾತಂತ್ರ್ಯ ಹೋರಾಟದುದ್ದಕ್ಕೂ ಹಿಂದುಗಳ ಪ್ರಮುಖ ಧ್ವನಿಯಾಗಿದ್ದರು. ಲಂಡನ್‌ನಲ್ಲಿ ಕಾನೂನು ವಿದ್ಯಾರ್ಥಿಯಾಗಿದ್ದ ಸಮಯದಲ್ಲೇ ಕ್ರಾಂತಿಕಾರ್ಯದ ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಜಾಗತಿಕ ಮನ್ನಣೆಯನ್ನು ಗಳಿಸಲು ಸಾವರ್ಕರ್ ಪ್ರಯತ್ನಿಸಿದ್ದರು. ಅಂತಹ ಸಾವರ್ಕರ್‌ರ ಕುರಿತು ಇತಿಹಾಸತಜ್ಞ ವಿಕ್ರಂ ಸಂಪತ್ ಅವರು ಬರೆದ ಪ್ರಸಿದ್ಧ ಪುಸ್ತಕ ಸಾವರ್ಕರ್ ಕನ್ನಡಕ್ಕೆ ಅನುವಾದಗೊಂಡಿದೆ. ಕನ್ನಡಕ್ಕೆ ಎಸ್ ಎಸ್ ನರೇಂದ್ರ ಕುಮಾರ್ ಅನುವಾದಿಸಿದ್ದಾರೆ. ಎರಡು ಭಾಗಗಳಲ್ಲಿ ಪ್ರಕಟಗೊಳ್ಳುತ್ತಿರುವ ವಿನಾಯಕ ದಾಮೋದರ ಸಾವರ್ಕರ್ ಕುರಿತಾದ ಈ ಜೀವನಚರಿತ್ರೆಯನ್ನು ಭಾರತ ಹಾಗೂ ಜಗತ್ತಿನ ವಿವಿಧೆಡೆ ಲಭ್ಯವಿರುವ ಅನೇಕಾನೇಕ ಮೂಲ ಆಕರಗಳನ್ನು ಆಧರಿಸಿ ರಚಿಸಲಾಗಿದೆ. ಭಾಗ 1ರಲ್ಲಿ ಅವರು ಅನುಭವಿಸಿದ ಸೆರೆವಾಸದಿಂದ ಹಿಡಿದು ಅಂತಿಮವಾಗಿ ಕಾಲಾಪಾನಿಯಿಂದ ಬಿಡುಗಡೆಯಾಗುವ ಅವಧಿಯವರೆಗಿನ ವಿಷಯಗಳ ಮೇಲೆ ಕೇಂದ್ರೀಕರಿಸಲಾಗಿದೆ. ಈ ಗ್ರಂಥವು ಸಾವರ್ಕರರ ಜೀವನ ಹಾಗೂ ಸಿದ್ಧಾಂತದ ಮೇಲೆ ಹೊಸ ಬೆಳಕು ಚೆಲ್ಲುತ್ತದೆ. ಅವರ ಎಲ್ಲಾ ಸಾಧನೆಗಳನ್ನು ಹಾಗೂ ವೈಫಲ್ಯಗಳನ್ನು ಈ ಪುಸ್ತಕಗಳ ಮೂಲಕ ತೆರೆದಿಡಲಾಗುತ್ತದೆ.

ವೆಬ್‌ಸೈಟ್ : www.sahityabooks.com

# ಸೇವಾಗಾಥಾ — ಕೃಷಿಯಲ್ಲಿ ಹೊಸ ಭರವಸೆಯ ಸಾಕ್ಷೀಕರಿಸಿದ ಕೃಷಿ ಪ್ರಯೋಗ ಪರಿವಾರ



ಕೃಷಿಯ ವಿಧಾನವನ್ನು ಬದಲಾಯಿಸಿದರೆ ಮತ್ತು ಮಧ್ಯವರ್ತಿಗಳನ್ನು ಮಾರುಕಟ್ಟೆಯಿಂದ ತೊಡೆದುಹಾಕಿದರೆ ಸಣ್ಣ ಮತ್ತು ಮಧ್ಯಮ ರೈತರು ಸಹ ಸಾಕಷ್ಟು ಸಂಪಾದಿಸಬಹುದು ಎನ್ನುವುದನ್ನು ಕರ್ನಾಟಕದ ಸಾವಯವ ಕೃಷಿ ಪ್ರಯೋಗ ಪರಿವಾರವು ಸಾಬೀತುಪಡಿಸಿದೆ. ಸಂಘದ ಹಿರಿಯ ಪ್ರಚಾರಕರಾದ ಉಪೇಂದ್ರ ಶೆಣೈ ಅವರ ಪ್ರೇರಣೆ ಮಾರ್ಗದರ್ಶನದೊಂದಿಗೆ ತೀರ್ಥಹಳ್ಳಿಯ ಪ್ರಗತಿಪರ ಸಾವಯವ ರೈತರಾದ ಪುರುಷೋತ್ತಮ ರಾವ್ ಹಾಗೂ ಅವರ ಸಹಕಾರಿ ಕಾರ್ಯಕರ್ತರ ಪ್ರಯತ್ನದಿಂದ 1990ರಲ್ಲಿ ಕೃಷಿ ಪ್ರಯೋಗ ಪರಿವಾರವು ಅನೌಪಚಾರಿಕ ರೂಪದಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆಯ ಪ್ರೇರಣೆಯಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಸಾವಯವ ಕೃಷಿಕರ ಸಂಖ್ಯೆ ಹೆಚ್ಚಾಗತೊಡಗಿತು. ಪ್ರತಿ ತಾಲೂಕಿನಲ್ಲಿ ಸಾವಯವ ಕೃಷಿಕರ ಸಂಘಟನೆಯಾಗಿ ಸಾವಯವ ಕೃಷಿ ಪರಿವಾರಗಳು ಹುಟ್ಟಿಕೊಂಡವು. ತಾಲೂಕು ಸಾವಯವ ಕೃಷಿ ಪರಿವಾರಗಳ ಮಹಾಮಂಡಲವಾಗಿ ಸಾವಯವ ಕೃಷಿ ಪ್ರಯೋಗ ಪರಿವಾರವು ಕರ್ನಾಟಕ ರಾಜ್ಯದಲ್ಲಿ 2009ರಲ್ಲಿ ಪ್ರಾರಂಭವಾಯಿತು. ಪ್ರಸ್ತುತ ಸಾವಯವ ಕೃಷಿ ಪರಿವಾರವು ಸಾವಯವ ಕೃಷಿ ಕ್ಷೇತ್ರದಲ್ಲಿ ವಿಶ್ವದ ಅತಿದೊಡ್ಡ ಸಂಸ್ಥೆಯಾಗಿದೆ. ಕರ್ನಾಟಕ ರಾಜ್ಯದ 175 ತಾಲೂಕುಗಳಲ್ಲಿ 15000ಕ್ಕಿಂತಲೂ ಹೆಚ್ಚು ರೈತರನ್ನು ಸಾವಯವ ಕೃಷಿಯಲ್ಲಿ ತೊಡಗಿಕೊಂಡು ಸ್ವಾವಲಂಬಿಗಳಾಗುವಂತೆ ಮಾಡಿದೆ.

ಈ ಸಂಸ್ಥೆ ಮೂಲತಃ ಸಾವಯವ ರೈತ ಸಂಘಗಳ ಸಂಘಟನೆಯಾಗಿದ್ದು, ಸಾವಯವ ಕೃಷಿ ಮಾಡಲು ರೈತರನ್ನು ಪ್ರೇರೇಪಿಸುವುದಲ್ಲದೆ, ಅವರ ಉತ್ಪನ್ನಗಳ ಮಾರಾಟಕ್ಕಾಗಿ (Marketing) ಸಾವಯವ ಮೇಳಗಳನ್ನು ಆಯೋಜಿಸುತ್ತಿದೆ. ರೈತರ ಸ್ಥಿತಿಯನ್ನು ಸುಧಾರಿಸಲು ಸಾವಯವ ಗೊಬ್ಬರಗಳ ತಯಾರಿಕೆ, ಜೈವಿಕ ಅನಿಲ ಬಳಕೆ, ಜೇನು ಸಾಕಣೆ, ಗೋಮೂತ್ರ ಮತ್ತು ಗೋಮಯವನ್ನು ಕೃಷಿಯಲ್ಲಿ ಬಳಸುವ ಬಗ್ಗೆ ಹಾಗೂ ನೆಲ ಜಲ ಸಂರಕ್ಷಣೆ ಬಗ್ಗೆ ತರಬೇತಿ ನೀಡಲಾಗಿದೆ. ಅಷ್ಟೇ ಅಲ್ಲ, ಕೃಷಿಕ ಗ್ರಾಹಕ ಮಿಲನ ಕಾರ್ಯಕ್ರಮದ ಹೆಸರಿನಲ್ಲಿ ತಿಂಗಳಿಗೆ ಎರಡು ದಿನ ನಡೆಯುವ ಮೇಳದಲ್ಲಿ ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶವಿದೆ. ಸಣ್ಣ ಸಣ್ಣ ಪ್ರಯೋಗಗಳಿಂದ ದೊಡ್ಡ ಯಶಸ್ಸು ದೊರೆಯಿತು. ಒಂದು ಕಾಲದಲ್ಲಿ 60–80 ರೂಪಾಯಿಗೆ ಒಂದು ಲೀಟರ್ ದೇಸಿ ಹಸುವಿನ ಹಾಲನ್ನು ಮಾರಾಟ ಮಾಡಿದ ರೈತರು, ಅದೇ ಹಾಲಿನಿಂದ ತುಪ್ಪ ತಯಾರಿಸಿ ಒಂದು ಕೇಜಿಗೆ 2000 ರೂಪಾಯಿಗೆ ಮಾರಾಟ ಮಾಡಲಾರಂಭಿಸಿದರು. ಹಾಗೆಯೇ ಅವರ ಕುಟುಂಬದ ಮಹಿಳೆಯರು ಸಾವಯವ ಕುಂಕುಮ ತಯಾರಿಸಲು ತರಬೇತಿ ಪಡೆದರು. ಈ ಕುಂಕುಮಕ್ಕೆ ಮಾರುಕಟ್ಟೆಯಲ್ಲಿ ಒಳ್ಳೆಯ ಬೇಡಿಕೆಯಿದೆ. ಕೆಲವರು ಜೇನುಸಾಕಣೆಯೊಂದಿಗೆ ಕೃಷಿ ಮಾಡಲು ಪ್ರಾರಂಭಿಸಿದರೆ, ಮತ್ತೆ ಕೆಲವು ರೈತರು ಗೋವಿನ ಸಗಣಿ ಗೊಬ್ಬರ ಮಾರಾಟ ಮಾಡುವ ಮೂಲಕ ಹಣವನ್ನು ಸಂಪಾದಿಸಿದರು. ರೈತರಿಗೆ ಉತ್ತಮ ಬೀಜಗಳು ದೊರೆಯಲಿ, ಬಂಜರು ಭೂಮಿ ಫಲವತ್ತಾಗಲಿ, ರೈತರು ನೆಲ ಜಲ ಸಂರಕ್ಷಣೆಯನ್ನು ಅಳವಡಿಸಿಕೊಳ್ಳಲಿ, ನೀರಾವರಿಯಲ್ಲಿ ಸ್ವಾವಲಂಬಿಗಳಾಗಲಿ ಮತ್ತು ಸಾವಯವ ಕೃಷಿ ಸುಲಭವಾಗಲಿ ಎಂಬ ಉದ್ದೇಶದಿಂದ ಈ ಎಲ್ಲ ಕ್ಷೇತ್ರಗಳಲ್ಲಿ ರೈತರಿಗೆ ತರಬೇತಿ ನೀಡಲಾಗಿದೆ. ಇದರ ಮೂಲಕ ಕೃಷಿ ಪ್ರಯೋಗ ಪರಿವಾರವು ರೈತರಿಗೆ ಬದುಕಲು ಹೊಸ ದಾರಿಯನ್ನು ತೋರಿಸಿದೆ.

**ಸಂಪಾದಕೀಯ ಸಹಕಾರ:** ದಿವ್ಯಾ ಹೆಗಡೆ ಕಬ್ಬಿನಗದ್ದೆ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಸುಬ್ರಾಯ ನಂದೋಡಿ, ದೀಕ್ಷಿತ್ ನಾಯರ್ ಮಂಡ್ಯ, ಸುಲಕ್ಷಣಾ

# ಮೂಢನಂಬಿಕೆ ಮತ್ತು ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟ ನಡೆಸುತ್ತಿರುವ ಅಸ್ಸಾಂನ
# ಪದ್ಮಶ್ರೀ ಡಾ. ಬಿರುಬಾಲಾ ರಾಭಾ



ಭಾರತದ ಈಶಾನ್ಯ ಭಾಗದ ಅಸ್ಸಾಂನಲ್ಲಿ ಕಳೆದ ಮೂರು ದಶಕಗಳಿಂದ ಮಾಟ ಮತ್ತು ವಾಮಾಚಾರದ ವಿರುದ್ಧ ಹೋರಾಡುತ್ತಾ, ಮಹಿಳಾ ದೌರ್ಜನ್ಯ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಜನರ ಮೂಢನಂಬಿಕೆಗಳನ್ನು ದೂರಮಾಡಲು ಪ್ರಯತ್ನ ಮಾಡುತ್ತಿರುವ ಡಾ. ಬಿರುಬಾಲಾ ರಾಭಾ ಅವರ ಜೀವನಗಾಥೆ ರೋಚಕವಾದುದು. ರಾಭಾ ಅವರು 1996 ರಿಂದ ಹೆಣ್ಣು ಮಕ್ಕಳನ್ನು ಮಾಟಗಾತಿ ಎಂದು ಬಿಂಬಿಸುವ (Witch Hunting) ಅನಿಷ್ಟದ ವಿರುದ್ಧ ಅಭಿಯಾನವನ್ನು ನಡೆಸುತ್ತಿದ್ದಾರೆ. ಅವರು 50ಕ್ಕೂ ಹೆಚ್ಚು ಮಹಿಳೆಯರನ್ನು ಮಾಟಗಾತಿಯರೆಂದು ಬಿಂಬಿಸುವುದರಿಂದ ರಕ್ಷಿಸಿದ್ದಾರೆ. ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ ವಿರುದ್ಧ ಕಾರ್ಯನಿರ್ವಹಿಸುವ ಮಿಷನ್ ಬಿರುಬಾಲಾವನ್ನು ಪ್ರಾರಂಭಿಸಿದರು.

1985ರ ಆ ಘಟನೆ ಅವರನ್ನು ಮೂಢನಂಬಿಕೆಗಳ ವಿರುದ್ಧ ಸೆಟೆದು ನಿಲ್ಲುವಂತೆ ಮಾಡಿತು. ಮಗನಿಗೆ ಆರೋಗ್ಯದಲ್ಲಿ ಏರುಪೇರು ಕಂಡುಬಂದಾಗ ಮಗನ ಮಾನಸಿಕ ಅಸ್ವಸ್ಥತೆಯ ಕಾರಣ ರಾಭಾ ಮಾಡಿದ ಮಾಟವೆಂದೂ, ಆಕೆ ಮಾಟಗಾತಿ ಎಂದೂ ಜನರು ಬಿಂಬಿಸುವ ಪ್ರಯತ್ನ ಮಾಡಿದರು. ವೈದ್ಯನೆಂದು ಹೇಳಿಕೊಂಡಿದ್ದಾತನ ಬಳಿ ಭೇಟಿ ಕೊಟ್ಟಾಗ ಮಾಟ ಮಾಡಿದ ಕಾರಣ ಮಗನ ಆಯುಷ್ಯ ಕೆಲವು ದಿನಗಳಷ್ಟೇ ಎಂದು ಭವಿಷ್ಯ ನುಡಿದರು. ಆದರೆ ಅದು ಸುಳ್ಳೆಂದು ಸಾಬೀತಾಯಿತು. ಆಗ ಇಂತಹ ಮೂಢನಂಬಿಕೆಗಳಿಗೆ ಮೋಸ ಹೋಗಬಾರದೆಂದು ನಿರ್ಧರಿಸಿದ ರಾಭಾ ಮೋಸದ ಚಟುವಟಿಕೆಗಳನ್ನು ಉತ್ತೇಜಿಸುವ ಮತ್ತು ಮೂಢನಂಬಿಕೆಗಳ ಸೋಗಿನಲ್ಲಿ ಚಿಕಿತ್ಸೆ ಕೊಡುವಂತೆ ನಟಿಸುವವರನ್ನು ಭೇಟಿ ಮಾಡುವುದನ್ನು ನಿಲ್ಲಿಸಿದರು. ತಮ್ಮ ನೆರೆಹೊರೆಯ ಮತ್ತು ತನ್ನಂತೆ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಮೂಢನಂಬಿಕೆ ಮತ್ತು ಮಹಿಳಾ ದೌರ್ಜನ್ಯದ ಸಾಧ್ಯತೆಗಳನ್ನು ವಿವರಿಸಿ ಅದರ ವಿರುದ್ಧ ಹೋರಾಡುವಂತೆ ಪ್ರೇರೇಪಿಸಿದರು.

ಆರಂಭದಲ್ಲಿ, ರಾಭಾ ಅವರು ತಮ್ಮ ಸ್ಥಳೀಯ ಗ್ರಾಮದಲ್ಲಿ ಮಹಿಳೆಯರ ಮೇಲಾಗುತ್ತಿದ್ದ ಈ ದೌರ್ಜನ್ಯ ಸೇರಿದಂತೆ ವಿವಿಧ ಸಾಮಾಜಿಕ ಅನಿಷ್ಟಗಳ ವಿರುದ್ಧ ಜಾಗೃತಿ ಮೂಡಿಸುವ ಮಹಿಳಾ ಸಂಘವಾದ ಠಾಕುರ್ವಿಲಾ ಮಹಿಳಾ ಸಮಿತಿಯನ್ನು ರಚಿಸಿದರು ಮತ್ತು 2006ರಲ್ಲಿ ಅಸ್ಸಾಂ ಮಹಿಳಾ ಸಮತಾ ಸೊಸೈಟಿಯಲ್ಲಿ ತೊಡಗಿಸಿಕೊಂಡರು. ಅಕ್ಕಪಕ್ಕದ ಹಳ್ಳಿಗಳಲ್ಲಿ ನಡೆಯುತ್ತಿರುವ ಪ್ರಕರಣಗಳ ಬಗ್ಗೆಯೂ ಅವರು ತಿಳಿದುಕೊಂಡರು. ಅಲ್ಲಿಯೂ ಕೂಡ ಹಲವಾರು ಮಹಿಳೆಯರನ್ನು 'ಮಾಟಗಾತಿಯರು' ಎಂದು ಬಿಂಬಿಸಿ ನಂತರ ಮನೆಯ ಆಶ್ರಯಕ್ಕೆ ಸಿಗದಂತೆ ಮಾಡಲಾಗುತ್ತಿತ್ತು.

ಪರಿಸ್ಥಿತಿಯ ತೀವ್ರತೆ ಅರಿತು ರಾಭಾ 2011ರಲ್ಲಿ ಅಸ್ಸಾಂನಲ್ಲಿ ಮಹಿಳೆಯರ ಮೇಲಾಗುತ್ತಿದ್ದ ಈ ದೌರ್ಜನ್ಯದ ವಿರುದ್ಧ ಮತ್ತು ಇತರ ಸಾಮಾಜಿಕ ಅನಿಷ್ಟಗಳ ವಿರುದ್ಧದ ಹೋರಾಟವಾಗಿ 'ಮಿಷನ್ ಬಿರುಬಾಲಾ' ಸಂಸ್ಥೆಯನ್ನು ಹುಟ್ಟು ಹಾಕಿದರು. ಇದರ ವಿರುದ್ಧ ಕಟ್ಟುನಿಟ್ಟಿನ ಕಾನೂನುಗಳನ್ನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು. ಅವರ ಸತತ ಪ್ರಯತ್ನದಿಂದ ಅಸ್ಸಾಂ ವಿಟ್ಚ್ ಹಂಟಿಂಗ್ (ನಿಷೇಧ, ತಡೆಗಟ್ಟುವಿಕೆ ಮತ್ತು ರಕ್ಷಣೆ) ಮಸೂದೆ 2015ಕ್ಕೆ ಕಾಯ್ದೆಯಾಗಿ ಜಾರಿಗೆ ಬಂತು. ಮೂಢ ನಂಬಿಕೆಗಳು, ಮಾಟಮಂತ್ರ ಮತ್ತು ಸಾಮಾಜಿಕ ಪೂರ್ವಗ್ರಹಗಳನ್ನು ಮಾರಕವಾಗಿ ಪರಿಗಣಿಸುವಲ್ಲಿ ಈ ಕಾಯ್ದೆ ನಿರ್ಣಾಯಕವಾಗಿದೆ.



ಅಸ್ಸಾಂನಲ್ಲಿ ತಮ್ಮ ದಿಟ್ಟತನದ ಕೆಲಸಕ್ಕಾಗಿ ಹಲವಾರು ಪ್ರಶಸ್ತಿಗಳು ಮತ್ತು ಪುರಸ್ಕಾರಗಳೊಂದಿಗೆ ರಾಭಾ ಗುರುತಿಸಲ್ಪಟ್ಟರು. 2005 ರಲ್ಲಿ ಅವರು ಈಶಾನ್ಯ ನೆಟ್‌ವರ್ಕ್ (ಅಸ್ಸಾಂನಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಹಕ್ಕುಗಳ ಸಂಸ್ಥೆ) ನಿಂದ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡರು ಮತ್ತು 2015 ರಲ್ಲಿ ಗೌಹಾಟಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಅನ್ನು ನೀಡಲಾಯಿತು. 2021ರಲ್ಲಿ ಅವರು ತಮ್ಮ ಸಾಮಾಜಿಕ ಕಾರ್ಯ ಮತ್ತು ಪ್ರಚಾರಕ್ಕಾಗಿ ಭಾರತ ಸರ್ಕಾರದಿಂದ ದೇಶದ ನಾಲ್ಕನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿ ಪಡೆದರು. ಸ್ವಿಟ್ಜರ್ಲೆಂಡ್‌ನ ಜಿನೀವಾದಲ್ಲಿರುವ ಮಹಿಳಾ ವಿಶ್ವ ಶೃಂಗಸಭೆಯ ಪ್ರತಿಷ್ಠಾನದಿಂದ $1,000 ನಗದು ಬಹುಮಾನವನ್ನು ಸಹ ಪಡೆದಿದ್ದಾರೆ.

ಲಾಭೋದ್ದೇಶವಿಲ್ಲದ ಪ್ರಗತಿಪರ ಸಂಸ್ಥೆ, 'ಮಿಷನ್ ಬಿರುಬಾಲಾ' ಸಾಮಾಜಿಕ ಅನಿಷ್ಟಗಳಿಂದ ಬದುಕುಳಿದವರಿಗೆ ಬೆಂಬಲವನ್ನು ನೀಡುವಲ್ಲಿ ಮತ್ತು ಅಂತಹ ಸಾಮಾಜಿಕ ಅನಿಷ್ಟಗಳು ಹೆಚ್ಚಾಗಿ ಕಂಡುಬರುವ ಸಮುದಾಯಗಳಲ್ಲಿ ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸುವ ತನ್ನ ಬದ್ಧತೆಯನ್ನು ಇಂದಿಗೂ ಮುಂದುವರಿಸುತ್ತಿದೆ. ತಮ್ಮ ಸಮಾಜದಲ್ಲಿ ನೆಲೆನಿಂತ ಅನಾಚಾರಗಳನ್ನು ದೂರ ಮಾಡುವ ಸಲುವಾಗಿ ರಾಭಾ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ.

## ಕೊಲ್ಕತ್ತ : ದೇಶದ ಮೊದಲ ನೀರೊಳಗಿನ ಮೆಟ್ರೋ ಸೇವೆಗೆ ಚಾಲನೆ

ಭಾರತದ ಮೊದಲ ನದಿಯೊಳಗಿನ ಮೆಟ್ರೋ ಸೇವೆಯನ್ನು ಪ್ರಧಾನಿ ನರೇಂದ್ರ ಮೋದಿ ಕೊಲ್ಕತ್ತದಲ್ಲಿ ಉದ್ಘಾಟಿಸಿದ್ದಾರೆ. ಹೂಗ್ಲಿ ನದಿಯ ಅಡಿಯಲ್ಲಿ ನಿರ್ಮಿಸಲಾದ ಸುರಂಗವು ಪೂರ್ವ–ಪಶ್ಚಿಮ ಕಾರಿಡಾರ್‌ನ ಹೌರಾ ಮೈದಾನ್ – ಎಸ್ ಪ್ಲೇನೇಡ್ ಸಂಪರ್ಕಿಸಲಿದೆ. ನದಿಪಾತ್ರದಿಂದ 16 ಮೀಟರ್ ಒಳಗೆ ಪ್ರಯಾಣದ ಅದ್ಭುತ ಅನುಭವವನ್ನು ಇದು ನೀಡಲಿದೆ. ಈ ಮಾರ್ಗದಲ್ಲಿ ಪ್ರತಿನಿತ್ಯ 7 ಲಕ್ಷ ಪ್ರಯಾಣಿಕರು ಸಂಚರಿಸುವ ನಿರೀಕ್ಷೆ ಇದೆ ಎಂದು ಕೋಲ್ಕತ್ತ ಮೆಟ್ರೊ ರೈಲು ನಿಗಮದ ಜನರಲ್ ಮ್ಯಾನೇಜರ್ ಉದಯ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ. ಪೂರ್ವ ಪಶ್ಚಿಮ ಮೆಟ್ರೊ ಕಾರಿಡಾರ್‌ನ ಭಾಗವಾಗಿ ಸುಮಾರು ₹120 ಕೋಟಿ ವೆಚ್ಚದಲ್ಲಿ ಪಶ್ಚಿಮ ಬಂಗಾಳದ ಹೂಗ್ಲಿ ನದಿಯ ಅಡಿಯಲ್ಲಿ ಭಾರತದ ಮೊದಲ ನೀರೊಳಗಿನ ಸುರಂಗ



ಮಾರ್ಗವನ್ನು ನಿರ್ಮಿಸಲಾಗಿದೆ. ನೀರೊಳಗಿನ 520 ಮೀಟರ್ ಉದ್ದದ ಈ ಮಾರ್ಗವನ್ನು ಪ್ರಯಾಣಿಕರು ಕೇವಲ 45 ಸೆಕೆಂಡುಗಳಲ್ಲಿ ಪ್ರಯಾಣಿಸಲಿದ್ದಾರೆ.

# ಸಾಲುದ್ದದ ಸುದ್ದಿಗಳು

## ಬಾಹ್ಯಾಕಾಶ ಕಾರ್ಯಾಚರಣೆಗೆ ನಾಲ್ವರು ಗಗನಯಾತ್ರಿಗಳು



ಭಾರತದ ಬಹುನಿರೀಕ್ಷಿತ ಗಗನಯಾನ ಯೋಜನೆಯಲ್ಲಿ ಬಾಹ್ಯಾಕಾಶ ಕಾರ್ಯಾಚರಣೆಗೆ ಆಯ್ಕೆ ಆಗಿರುವ ನಾಲ್ವರು ಗಗನಯಾತ್ರಿಕರ ಹೆಸರುಗಳನ್ನು ಘೋಷಿಸಲಾಗಿದೆ. ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣ ನಾಯರ್, ಗ್ರೂಪ್ ಕ್ಯಾಪ್ಟನ್ ಅಜಿತ್ ಕೃಷ್ಣನ್, ಗ್ರೂಪ್ ಕ್ಯಾಪ್ಟನ್ ಅಂಗದ್ ಪ್ರತಾಪ್ ಮತ್ತು ವಿಂಗ್ ಕಮಾಂಡರ್ ಶುಭಾಂಶು ಶುಕ್ಲಾ ಹೆಸರನ್ನು ಸೂಚಿಸಲಾಗಿದೆ. ಈ ನಾಲ್ವರು ಗಗನಯಾನಿಗಳು ರಷ್ಯಾದಲ್ಲಿ ಸತತ ತರಬೇತಿ ಪಡೆದಿದ್ದು, ಪ್ರಸ್ತುತ ಇಸ್ರೋ ತರಬೇತಿ ಕೇಂದ್ರದಲ್ಲಿ ಪರೀಕ್ಷಾರ್ಥ ಪ್ರಯೋಗಗಳಲ್ಲಿ ಭಾಗಿಯಾಗಿದ್ದಾರೆ.

## ಇಸ್ರೋದ ಮೂರು ಯೋಜನೆಗಳಿಗೆ ಮೋದಿ ಚಾಲನೆ

ಇಸ್ರೋದ ಮೂರು ಬಾಹ್ಯಾಕಾಶ ಮೂಲ ಸೌಕರ್ಯ ಯೋಜನೆಗಳಿಗೆ ಪ್ರಧಾನಿ ಮೋದಿ ಚಾಲನೆ ನೀಡಿದ್ದಾರೆ. ವಿಎಸ್‌ಎಸ್‌ಸಿಯಲ್ಲಿನ ಟ್ರೈಸೋನಿಕ್ ವಿಂಡ್ ಟನಲ್, ತಮಿಳುನಾಡಿನ ಮಹೇಂದ್ರಗಿರಿಯ ಇಸ್ರೋ ಪ್ರೊಪಲ್ಷನ್ ಕಾಂಪ್ಲೆಕ್ಸ್‌ನಲ್ಲಿ ನಿರ್ಮಿತ ಸೆಮಿ ಕ್ರಯೋಜೆನಿಕ್ ಇಂಟಿಗ್ರೇಟೆಡ್ ಎಂಜಿನ್ ಮತ್ತು ಸ್ಟೇಜ್ ಸೆಟ್ ಫೆಸಿಲಿಟಿ ಮತ್ತು ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಸ್ಪೇಸ್ ಸೆಂಟರ್‌ನಲ್ಲಿ ಪಿಎಸ್‌ಎಲ್‌ಜಿ ಜೋಡಣಾ ಘಟಕವನ್ನು ಉದ್ಘಾಟಿಸಿದರು.

## ದೇಶಾದ್ಯಂತ 700 ಲಕ್ಷ ಮೆಟ್ರಿಕ್ ಟನ್ ಧಾನ್ಯ ಸಂಗ್ರಹಣಾ ಸೌಲಭ್ಯ ನಿರ್ಮಾಣ

ಮುಂದಿನ ಐದು ವರ್ಷಗಳಲ್ಲಿ ಧಾನ್ಯ ಸಂಗ್ರಹ ಯೋಜನೆಯಡಿಯಲ್ಲಿ ದೇಶಾದ್ಯಂತ 700 ಲಕ್ಷ ಮೆಟ್ರಿಕ್ ಟನ್ ಧಾನ್ಯ ಸಂಗ್ರಹಣಾ ಸೌಲಭ್ಯಗಳನ್ನು ನಿರ್ಮಿಸಲಾಗುವುದು. ದೆಹಲಿಯಲ್ಲಿ ಸಹಕಾರಿ ಕ್ಷೇತ್ರದ ಅನೇಕ ಪ್ರಮುಖ ಉಪಕ್ರಮಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಸೌಲಭ್ಯವನ್ನು ಕಲ್ಪಿಸಲು ಮುಂದಿನ ವರ್ಷಗಳಲ್ಲಿ 1 ಲಕ್ಷದ 25 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುವುದು ಎಂದು ಹೇಳಿದರು.

## ಜುಲೈ 1 ರಿಂದ ದೇಶವ್ಯಾಪಿ ಹೊಸ ಅಪರಾಧ ಕಾನೂನು ಜಾರಿಗೆ

ಜುಲೈ 1 ರಿಂದ ಹೊಸ ಅಪರಾಧ ಕಾನೂನುಗಳು ದೇಶವ್ಯಾಪಿ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ. ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷಿ ಕಾಯಿದೆಗಳು ಜಾರಿಗೆ ತರಲಿದ್ದಾರೆ. ಈ ಬಗ್ಗೆ ಡಿಸೆಂಬರ್ 21, 2023 ರಂದು ಸಂಸತ್ತು ಮೂರು ಕಾನೂನುಗಳನ್ನು ಅನುಮೋದಿಸಿದಲ್ಲದೆ ಡಿಸೆಂಬರ್ 25 ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇದಕ್ಕೆ ಒಪ್ಪಿಗೆ ನೀಡಿದರು. ಈ ಮೂರು ಕಾನೂನುಗಳ ಅನುಷ್ಠಾನದೊಂದಿಗೆ ದೇಶದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯು ಸಂಪೂರ್ಣ ಪುನಶ್ಚೇತನಕ್ಕೆ ಒಳಗಾಗುತ್ತದೆ.




## ಲೋಕಸಭೆ ಚುನಾವಣೆ ಮುನ್ನವೇ ಮತದಾರರ ಹಕ್ಕು ಅಭಿಯಾನ

ಲೋಕಸಭೆ ಚುನಾವಣೆ ಹತ್ತಿರವಾಗುತ್ತಿದ್ದು, ಇದೀಗ ಚುನಾವಣೆ ದಿನಾಂಕ ಘೋಷಣೆ ಮುನ್ನವೇ ಕೇಂದ್ರವು ಮತದಾರರು ಹಕ್ಕು ಚಲಾಯಿಸುವಂತೆ ಮತ್ತು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಲು ರಾಷ್ಟ್ರೀಯ ಅಭಿಯಾನವನ್ನು ಕೈಗೊಂಡಿದೆ. "ಬನೇಗಾ ದೇಶ್ ಮಹಾನ್, ಜಬ್ ವೋಟ್ ಕರೆಂಗೆ ಹಮ್" ಎಂಬ ಘೋಷವಾಕ್ಯ ಮೂಲಕ ಅಭಿಯಾನ ಆರಂಭಿಸಿದೆ. ದೇಶದ ಸುಮಾರು 1.85 ಕೋಟಿ ಮೊದಲ ಬಾರಿಗೆ ಮತ ಹಾಕುವ ಅರ್ಹತೆ ಹೊಂದಿರುವ ಮತದಾರರ ದೃಷ್ಟಿಯಿಂದ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th MARCH 2024

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26

FORTNIGHTLY 15-03-2024



## ಭಾರತದ ಮಿತ್ರರಾಷ್ಟ್ರಗಳಿಗೂ ಭದ್ರತೆ ನೀಡುವ ಕಾರವಾರದ ವಿಮಾನವಾಹಕ ನೌಕೆ



'ಸೀಬರ್ಡ್' ಯೋಜನೆಯಡಿ ಭಾರತೀಯ ನೌಕಾಪಡೆಯ ಕಾರವಾರ ನೆಲೆಯಲ್ಲಿ ಮೂಲಸೌಕರ್ಯ ಯೋಜನೆಗಳನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಿಸಿದ್ದಾರೆ. ಈ ಯೋಜನೆಗಳು ಭಾರತದ ಕಡಲ ಭದ್ರತಾ ಹಿತಾಸಕ್ತಿಗಳನ್ನು ಬಲಪಡಿಸುವ ಗುರಿಯನ್ನು ಹೊಂದಿವೆ. ನೌಕಾ ನೆಲೆಯ ವಿಸ್ತರಣೆಯು 32 ಹಡಗುಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ನಿಲ್ಲಿಸಲು ಅನುಮೋದಿಸಲ್ಪಟ್ಟಿದೆ.

ಸಂಪೂರ್ಣವಾಗಿ ಕಾರ್ಯಾರಂಭದ ನಂತರ, ನೌಕಾ ಸೌಲಭ್ಯಗಳು ಸುಮಾರು 50,000 ವ್ಯಕ್ತಿಗಳು ನೆಲೆಸುವ ನಿರೀಕ್ಷೆಯನ್ನು ಕಲ್ಪಿಸಿದೆ. ಇದು ಸ್ಥಳೀಯ ಆರ್ಥಿಕತೆಗೆ ಗಣನೀಯ ಕೊಡುಗೆ ನೀಡುತ್ತದೆ. ನೌಕಾನೆಲೆಯ ಸ್ಥಾಪನೆ ಮತ್ತು ಹಡಗುಗಳ ನಿರ್ವಹಣಾ ಅಗತ್ಯಗಳು ಈ ಪ್ರದೇಶದ ಕೈಗಾರಿಕಾ ಬೆಳವಣಿಗೆಗೆ ವೇಗವರ್ಧಕಗಳಾಗಿ ಕಾರ್ಯನಿರ್ವಹಿಸುವ ಜೊತೆಗೆ ಪ್ರವಾಸೋದ್ಯಮವನ್ನು ಉತ್ತೇಜಿಸಲು ಸಿದ್ಧವಾಗಿದೆ. ಈ ನೆಲೆಯು ಸುಮಾರು 8,000 ಸಿಬ್ಬಂದಿಗೆ ಸರ್ಕಾರಿ ಉದ್ಯೋಗವನ್ನು ಒದಗಿಸಲಿದೆ. ಹಿಂದೂ ಮಹಾಸಾಗರ ಪ್ರದೇಶದಲ್ಲಿ ನಿಯಮ ಆಧಾರಿತ ಕಡಲತಡಿಯ ಕ್ರಮಗಳನ್ನು ಬಲಪಡಿಸಲಾಗಿದೆ. ಈ ನೌಕಾನೆಲೆಯು ಭಾರತ ನೆರೆಯ ಮಿತ್ರ ದೇಶಗಳ ಸ್ವಾಯತ್ತತೆ ಮತ್ತು ಸಾರ್ವಭೌಮತ್ವವನ್ನು ರಕ್ಷಿಸುತ್ತದೆ.

## ಬ್ರಿಟನ್ ಸಂಸತ್‌ನಲ್ಲಿ ಭಾರತವನ್ನು ಕೊಂಡಾಡಿದ ಕಾಶ್ಮೀರಿ ಪತ್ರಕರ್ತೆ



ಭಾರತದ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಪತ್ರಕರ್ತೆ ಯಾನಾ ಮಿರ್ ಅವರು ಬ್ರಿಟಿಷ್ ಸಂಸತ್ತಿನ ಕಟ್ಟಡದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹಾಜರಿದ್ದರು. ಈ ವೇಳೆ ಅಲ್ಲಿ ನೆರೆದಿದ್ದ ಜನರಿಗೆ ಯಾನಾ ಮಿರ್ ತನ್ನ ಮಾತುಗಳಿಂದ ಬೆರಗು ಮೂಡಿಸಿದ್ದಾರೆ. ಈ ಕಾರ್ಯಕ್ರಮವನ್ನು ಜಮ್ಮು ಕಾಶ್ಮೀರ ಸ್ಟಡಿ ಸೆಂಟರ್, ಯುಕೆ (ಜೆಕೆಎಸ್ಸಿ) ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಯಾನಾ ಮೀರ್ ನಾನು ಮಾಲಾಲಾ ಯೂಸುಫ್‌ಝೈ ಅಲ್ಲ. ಆಕೆಯಂತೆ ನಾನು ನನ್ನ ದೇಶದಿಂದ ಓಡಿ ಹೋಗಿ ನಿಮ್ಮಲ್ಲಿ ಆಶ್ರಯ ಕೇಳುವ ಸ್ಥಿತಿ ಬಂದಿಲ್ಲ. ನನ್ನ ದೇಶದಲ್ಲಿ ನಾನು ಸ್ವತಂತ್ರ ಹಾಗೂ ಸುರಕ್ಷಿತಳಾಗಿದ್ದೇನೆ. ಭಾರತದ ಬಗ್ಗೆ ಸುಳ್ಳು ಪ್ರಚಾರ ಹರಡುವುದನ್ನು ನಿಲ್ಲಿಸಬೇಕು. ಭಾರತದ ಅವಿಭಾಜ್ಯ ಅಂಗವಾಗಿರುವ ಕಾಶ್ಮೀರದಲ್ಲಿ ತಾವು ಸಂಪೂರ್ಣ ಸುರಕ್ಷಿತ ಹಾಗೂ ಸ್ವತಂತ್ರ ಎಂಬ ಭಾವನೆ ಇದೆ. ಯುಕೆ ಸಂಸತ್ತು ಆಯೋಜಿಸಿದ್ದ 'ಸಂಕಲ್ಪ ದಿವಸ' ಕಾರ್ಯಕ್ರಮದಲ್ಲಿ ಮಾತನಾಡಿದ ಯಾನಾ, ಜಮ್ಮು ಮತ್ತು ಕಾಶ್ಮೀರದ ಜನರ ನಡುವೆ ವಿಭಜನೆ ಉಂಟು ಮಾಡುವುದನ್ನು ಅಂತಾರಾಷ್ಟ್ರೀಯ ಸಮುದಾಯವು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

## 5,021 ಕೋಟಿ ರೂ ವೆಚ್ಚದ 'ಪಿಎಂ–ಸೂರ್ಯ ಘರ್' ಯೋಜನೆಗೆ ಕೇಂದ್ರ ಸಂಪುಟ ಅಸ್ತು



ಮೇಲ್ಛಾವಣಿ ಸೋಲಾರ್ ಅಳವಡಿಸಲು ಮತ್ತು ಒಂದು ಕೋಟಿ ಮನೆಗಳಿಗೆ ಪ್ರತಿ ತಿಂಗಳು 300 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸಲು ಒಟ್ಟು 75,021 ಕೋಟಿ ರೂ.ಗಳ ವೆಚ್ಚದ 'ಪಿಎಂ–ಸೂರ್ಯ ಘರ್: ಮುಫ್ತ್ ಬಿಜ್ಲಿ ಯೋಜನೆ'ಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ವರ್ಷ ಫೆಬ್ರವರಿ 13 ರಂದು ಯೋಜನೆಗೆ ಚಾಲನೆ ನೀಡಲಾಗಿತ್ತು. ಈ ಉಪಕ್ರಮವು ಸೌರ ಉತ್ಪಾದನೆ ಮತ್ತು ಪೂರೈಕೆ ಸರಪಳಿಗೆ ಉತ್ತೇಜನ ನೀಡುತ್ತದೆ. ಇದು ಸೌರ ಶಕ್ತಿ ಪರಿಸರ ವ್ಯವಸ್ಥೆಯನ್ನು ಬಲಪಡಿಸುತ್ತದಲ್ಲದೆ ಉತ್ಪಾದನೆ, ಲಾಜಿಸ್ಟಿಕ್ಸ್, ಪೂರೈಕೆ ಸರಪಳಿ, ಮಾರಾಟ, ಸ್ಥಾಪನೆ ಮತ್ತು ಇತರ ಸೇವೆಗಳಲ್ಲಿ ಸುಮಾರು 17 ಲಕ್ಷ ನೇರ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಎನ್ನಲಾಗಿದೆ.

## 'ವಿಕ್ರಮಾದಿತ್ಯ ವೇದಿಕ್ ಗಡಿಯಾರ' ಉದ್ಘಾಟನೆ




ಮಧ್ಯಪ್ರದೇಶದ ಉಜ್ಜಯಿನಿ ನಗರದಲ್ಲಿ ಭಾರತೀಯ 'ಪಂಚಾಂಗ' ಆಧಾರಿತ 'ವಿಕ್ರಮಾದಿತ್ಯ ವೇದಿಕ್ ಗಡಿಯಾರ'ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಉದ್ಘಾಟಿಸಿದರು. ಭಾರತೀಯ ಸಮಯ ಲೆಕ್ಕಾಚಾರದ ವ್ಯವಸ್ಥೆಯು ವಿಶ್ವದ ಅತ್ಯಂತ ಹಳೆಯ, ಸೂಕ್ಷ್ಮ, ಶುದ್ಧ, ದೋಷ–ಮುಕ್ತ, ಅಧಿಕೃತ ಮತ್ತು ವಿಶ್ವಾಸಾರ್ಹ ವಿಧಾನವಾಗಿದೆ. ಈ ಅತ್ಯಂತ ವಿಶ್ವಾಸಾರ್ಹ ವ್ಯವಸ್ಥೆಯನ್ನು ಉಜ್ಜಯಿನಿಯಲ್ಲಿ ವಿಕ್ರಮಾದಿತ್ಯ ವೈದಿಕ ಗಡಿಯಾರದ ರೂಪದಲ್ಲಿ ಮರುಸ್ಥಾಪಿಸಲಾಗುತ್ತಿದೆ. ತಜ್ಞರ ಪ್ರಕಾರ, ಪ್ರಪಂಚದ ಪ್ರಮಾಣಿತ ಸಮಯವನ್ನು 300 ವರ್ಷಗಳ ಹಿಂದೆ ಉಜ್ಜಯಿನಿಯಿಂದ ನಿರ್ಧರಿಸಲಾಯಿತು. ದೀರ್ಘಕಾಲದವರೆಗೆ, ಉಜ್ಜಯಿನಿಯನ್ನು ಸಮಯದ ಲೆಕ್ಕಾಚಾರದ ಕೇಂದ್ರವೆಂದು ಪರಿಗಣಿಸಲಾಗಿದೆ. ಇದಲ್ಲದೆ, ಕರ್ಕಾಟಕ ಸಂಕ್ರಾಂತಿ ರೇಖೆಯು ನಗರದ ಮೂಲಕ ಹಾದುಹೋಗುತ್ತದೆ.

## ಲಂಚ ಪ್ರಕರಣಗಳಲ್ಲಿ ಸಂಸದರು, ಶಾಸಕರಿಗೆ ಕಾನೂನು ರಕ್ಷಣೆ ಸಾಧ್ಯವಿಲ್ಲ: ಸುಪ್ರೀಂ

ರಾಜಕಾರಣಿಗಳ ಮೇಲಿನ ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಮಹತ್ವದ ತೀರ್ಪು ನೀಡಿದೆ. ಲಂಚ ಪಡೆದ ಪ್ರಕರಣಗಳಲ್ಲಿ ಸಂಸದರು ಹಾಗೂ ಶಾಸಕರಿಗೆ ಕಾನೂನು ರಕ್ಷಣೆ ನೀಡಲು ಸಾಧ್ಯವಿಲ್ಲ ಎಂದಿದೆ. ಅಲ್ಲದೇ ಶಾಸಕರಿಗೆ ಕಾನೂನು ಕ್ರಮದಿಂದ ವಿನಾಯಿತಿ ನೀಡುವ ಹಿಂದಿನ ಆದೇಶವನ್ನು ರದ್ದುಪಡಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ಅವರ ನೇತೃತ್ವದ ಏಳು ಸದಸ್ಯರ ಸಂವಿಧಾನಿಕ ಪೀಠ ಈ ತೀರ್ಪು ನೀಡಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ, ಎಂ.ಎಂ.ಸುಂದರೇಶ್, ಪಿ.ಎಸ್.ನರಸಿಂಹ, ಜೆ.ಬಿ.ಪರ್ಡಿವಾಲ, ಸಂಜಯ್ ಕುಮಾರ್ ಮತ್ತು ಮನೋಜ್ ಮಿಶ್ರಾ ಇದ್ದರು. ಸಂಸತ್ ಸದಸ್ಯರು ಹಾಗೂ ರಾಜ್ಯಗಳ ವಿಧಾನ ಮಂಡಲದ ಸದಸ್ಯರು ಲಂಚ ಪಡೆದಾಗ, ಭ್ರಷ್ಟಾಚಾರ ಎಸಗಿದಾಗ ಅವರ ವಿರುದ್ಧ ತನಿಖೆ ನಡೆಯದಂತೆ ಕಾನೂನು ರಕ್ಷಣೆ ನೀಡಲು ಸಾಧ್ಯವಿಲ್ಲ ಎಂದು ಹೇಳಿದೆ.

## ರುದ್ರೇಶ್ ಹತ್ಯೆ ಆರೋಪಿ ಆಫ್ರಿಕಾದಲ್ಲಿ ಬಂಧನ

ಬೆಂಗಳೂರಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ ರುದ್ರೇಶ್ ಅವರ ಹತ್ಯೆಯ ಪ್ರಮುಖ ಸಂಚುಕೋರ, ಆಫ್ರಿಕಾದ ತಾಂಜಾನಿಯಾದಲ್ಲಿ ತಲೆ ಮರೆಸಿಕೊಂಡಿದ್ದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಸದಸ್ಯ ಫೌಜ್ ನಯಾಜಿ ಎಂಬಾತನನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಮುಂಬೈ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ. ಗುಪ್ತಚರ ಮಾಹಿತಿ ಆಧರಿಸಿ ನಯಾಜಿ ತಾಂಜಾನಿಯಾದಲ್ಲಿ ಇರುವುದನ್ನು ಪತ್ತೆ ಮಾಡಲಾಗಿತ್ತು. ಅಲ್ಲಿನ ಅಧಿಕಾರಿಗಳು ಆತನನ್ನು ಹಿಡಿದು, ಭಾರತಕ್ಕೆ ಕಳುಹಿಸಿದ್ದರು.

ಬೆಂಗಳೂರಿನ ಶಿವಾಜಿನಗರದ ಆರ್‌ಎಸ್‌ಎಸ್ ಕಾರ್ಯಕರ್ತ ರುದ್ರೇಶ್ ಅವರನ್ನು 2016ರ ಅಕ್ಟೋಬರ್ 16 ರಂದು ಹತ್ಯೆ ಮಾಡಲಾಗಿತ್ತು. ಪಿಎಫ್‌ಐನ ನಾಲ್ವರು ಸದಸ್ಯರು ಅವರ ಹತ್ಯೆ ಮಾಡಿದ್ದರು. ಹತ್ಯೆಯ ಪ್ರಮುಖ ಸಂಚುಕೋರ ಎಂಬ ಆರೋಪ ನಯಾಜಿ ಮೇಲಿದೆ. ಎಸ್‌ಡಿಪಿಐ ಪಕ್ಷದ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಆಗಿದ್ದ ನಯಾಜಿ, ಆಸಿಂ ಷರೀಫ್ ಎನ್ನುವ ವ್ಯಕ್ತಿಯೊಬ್ಬನ ಜೊತೆಗೂಡಿ ರುದ್ರೇಶ್ ಕೊಲೆಗೆ ಸಂಚು ರೂಪಿಸಿದ್ದ ಎಂಬ ಆರೋಪ ಇದೆ. ಎನ್‌ಐಎ 2017ರ ಏಪ್ರಿಲ್ 12ರಂದು ಸಲ್ಲಿಸಿದ ಆರೋಪ ಪಟ್ಟಿ ಪ್ರಕಾರ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪೊಲೀಸರು 5 ಮಂದಿಯನ್ನು ಬಂಧಿಸಿದ್ದಾರೆ.

## ದೇಶದ ಬಡತನ ಶೇ.5ಕ್ಕಿಂತ ಕಡಿಮೆ

ರಾಷ್ಟ್ರಾದ್ಯಂತ ಬಡತನದ ಪಿಡುಗು ಗಮನಾರ್ಹವಾಗಿ ತಗ್ಗಿದೆ ಅಥವಾ ಶೇ.5ಕ್ಕಿಂತ ಕೆಳಕ್ಕೆ ಇಳಿಕೆಯಾಗಿರುವುದು ಕೌಟುಂಬಿಕ ಬಳಕೆ ವೆಚ್ಚದ ಸಮೀಕ್ಷೆ (ಎಚ್ ಸಿಇಎಸ್)ಯ ಆಧಾರದಲ್ಲಿ ಸ್ಪಷ್ಟವಾಗಿದೆ ಎಂದು ನೀತಿ ಆಯೋಗದ ಸಿಇಒ ಬಿ.ವಿ.ಆರ್. ಸುಬ್ರಹ್ಮಣ್ಯಂ ತಿಳಿಸಿದ್ದಾರೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಅನುಭೋಗದ ಪ್ರಮಾಣವು 2.5 ಪಟ್ಟು ಏರಿಕೆ ಕಂಡಿದ್ದು, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಅಂತರವೂ ಗಣನೀಯವಾಗಿ ಕಡಿಮೆಯಾಗಿರುವುದು ಅಂಕಿ–ಅಂಶಗಳಿಂದ ವ್ಯಕ್ತವಾಗಿದೆ.

2014ರಲ್ಲಿ, ಮಾಜಿ ಆರ್‌ಬಿಐ ಗವರ್ನರ್ ಸಿ. ರಂಗರಾಜನ್ ನೇತೃತ್ವದ ಸಮಿತಿಯು ಮಾಸಿಕ ವೆಚ್ಚ ಬಡತನ ರೇಖೆ ನಗರ ಪ್ರದೇಶಗಳಲ್ಲಿ 1,407 ರೂ. ಮತ್ತು ಗ್ರಾಮೀಣ ಪ್ರದೇಶದಲ್ಲಿ 972 ರೂ.ಆಗಿದೆ ಎಂದು ಹೇಳಿತ್ತು. ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ ಗ್ರಾಮೀಣ ಪ್ರದೇಶಗಳಲ್ಲಿ ರೂ 1,864 ಮತ್ತು ನಗರ ಕೇಂದ್ರಗಳಲ್ಲಿ 2,695ರೂ.ಗಳ ಸರಾಸರಿ ಮಾಸಿಕ ಬಳಕೆಯ ವೆಚ್ಚ ಹೊಂದಿದೆ. ನಗರಗಳಿಗಿಂತಲೂ ಹಳ್ಳಿಗಳಲ್ಲಿ ಬಳಕೆ ಪ್ರಮಾಣ ಕ್ಷಿಪ್ರಗತಿಯಿಂದ ವರ್ಧಿಸುತ್ತಿದೆ. ಅಸಮಾನತೆ ಕಡಿಮೆಯಾಗುತ್ತಿದೆ. ನಗರ–ಹಳ್ಳಿಗಳ ಬಳಕೆ ಪ್ರಮಾಣದಲ್ಲಿನ ಅಂತರವು 2011–12ರಲ್ಲಿ ಶೇ. 84ರಷ್ಟಿದ್ದು, 2022–23ರಲ್ಲಿ ಶೇ.71ಕ್ಕೆ ಇಳಿಕೆಯಾಗಿದೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 8722552497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.